# ಇಸ್ಲಾಮ್ ಧರ್ಮದ ಪಂಚ ಆಧಾರ ಸ್ತಂಭಗಳು



## ಶಹಾದಃ (ಸತ್ಯಸಾಕ್ಷ್ಯ)

“ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದನ್ ರಸೂಲುಲ್ಲಾಹ್” ಎಂದು ಹೇಳುವ ಮೂಲಕ ಮುಸ್ಲಿಮರು ತಮ್ಮ ವಿಶ್ವಾಸವನ್ನು ಘೋಷಿಸುತ್ತಾರೆ.
ಇದರ ಅರ್ಥ: ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾಗಿ ಅನ್ಯರಿಲ್ಲ ಎಂದು ನಾನು ಸಾಕ್ಷಿ ನುಡಿಯುತ್ತೇನೆ ಮತ್ತು ಮುಹಮ್ಮದ್(ಸ)ರು ಅಲ್ಲಾಹನ ಸಂದೇಶವಾಹಕರು ಎಂದು ನಾನು ಸಾಕ್ಷಿ ನುಡಿಯುತ್ತೇನೆ.



## ಸಲಾತ್ (ಕಡ್ಡಾಯ ಆರಾಧನೆ)

ದಿನನಿತ್ಯ ಐದು ಹೊತ್ತು ನಿರ್ವಹಿಸ ಬೇಕಾದ ದೈಹಿಕ ಮತ್ತು ಮಾನಸಿಕ ಆರಾಧನೆ. ಈ ಆರಾಧನೆಯಿರುವುದು ದಿನವಿಡೀ ದೇವನನ್ನು ಸ್ಮರಿಸುತ್ತಾ ಅವನೊಂದಿಗೆ ಕ್ಷಮೆ ಬೇಡುವುದಕ್ಕೆ. ಮಕ್ಕಾದಲ್ಲಿರುವ ಕಅ್‌ಬಾಲಯಕ್ಕೆ ತಿರುಗಿ ನಿಂತು ಈ ಆರಾಧನೆಯನ್ನು ಸೂರ್ಯೋದಯಕ್ಕೆ ಮೊದಲು, ನಡು ಮಧ್ಯಾಹ್ನ, ಮಧ್ಯಾಹ್ನದ ನಂತರ, ಸಂಜೆ ಸೂರ್ಯಾಸ್ತವಾದಾಗ ಮತ್ತು ರಾತ್ರಿಯಲ್ಲಿ ನಿರ್ವಹಿಸಬೇಕಾಗಿದೆ.



## ಝಕಾತ್ (ಕಡ್ಡಾಯದಾನ)

ಝಕಾತ್ ಎಂದರೆ ಪರಿಶುದ್ಧಿ. ಮುಸ್ಲಿಮರು ತಮ್ಮ ಸಂಪತ್ತಿನ ಎರಡೂವರೆ ಶೇಕಡವನ್ನು ಪ್ರತಿವರ್ಷ ಕಡ್ಡಾಯವಾಗಿ ದಾನ ಮಾಡುತ್ತಾರೆ. ಝಕಾತ್ ಸಂಪತ್ತನ್ನು ಶುದ್ಧೀಕರಿಸುತ್ತದೆ. ಝಕಾತ್ ವ್ಯವಸ್ಥೆಯು ಸರಿಯಾಗಿ ಪಾಲನೆಯಾದರೆ ಸಂಪತ್ತು ಬಲಾಢ್ಯರ ಕೈಯಲ್ಲಿ ಶೇಖರಣೆಯಾಗದೆ ಸಮಾಜದ ಎಲ್ಲ ವರ್ಗದವರಲ್ಲೂ ಹರಿದಾಡುತ್ತದೆ.



## ಸೌಮ್ (ಉಪವಾಸ)

ವರ್ಷದಲ್ಲಿ ಒಂದು ತಿಂಗಳು ಮುಸ್ಲಿಮರು ಆಹಾರ, ಪಾನೀಯ ಮತ್ತು ಪತ್ನಿಯೊಂದಿಗಿನ ಲೈಂಗಿಕ ಸಹವಾಸದಿಂದ ದೂರವಾಗುತ್ತಾರೆ. ಉಪವಾಸ ಪ್ರತಿದಿನ ಪ್ರಭಾತೋದಯದಿಂದ ಸೂರ್ಯಾಸ್ತದ ತನಕವಿರುತ್ತದೆ. ಉಪವಾಸ ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿಯೂ ಆಚರಿಸಬೇಕಾಗಿದೆ. ಆತ್ಮಸಂಯಮ ಮತ್ತು ದೇವಭಕ್ತಿಯನ್ನು ಪಡೆಯುವುದೇ ಉಪವಾಸದ ಮುಖ್ಯ ಉದ್ದೇಶ.



## ಹಜ್ಜ್ (ತೀರ್ಥಾಟನೆ)

ವಿವಿಧ ಧಾರ್ಮಿಕ ಕರ್ಮಗಳನ್ನು ನಿರ್ವಹಿಸುವುದಕ್ಕಾಗಿ ಜಗತ್ತಿನ ಕೇಂದ್ರ ಬಿಂದುವಾದ ಮಕ್ಕಾದಲ್ಲಿರುವ ಕಅ್‌ಬಾಲಯಕ್ಕೆ ತೀರ್ಥಾಟನೆ ಕೈಗೊಳ್ಳುವುದನ್ನು ಹಜ್ಜ್ ಎನ್ನಲಾಗುತ್ತದೆ. ಆರ್ಥಿಕವಾಗಿಯೂ ದೈಹಿಕವಾಗಿಯೂ ಸಾಮರ್ಥ್ಯವಿರುವ ಪ್ರತಿಯೊಬ್ಬರೂ ಆಯುಷ್ಯದಲ್ಲೊಮ್ಮೆ ಇದನ್ನು ನಿರ್ವಹಿಸುವುದು ಕಡ್ಡಾಯ. ಹಜ್ಜ್‌ನ ಸಂದರ್ಭ ತೀರ್ಥಾಟಕರು ಮೇಲು ಕೀಳೆಂಬ ಬೇಧಭಾವವನ್ನು ಅಳಿಸಿಬಿಡುವ ಸರಳ ಉಡುಪನ್ನು ಧರಿಸಿ, ದೇವರ ಮುಂದೆ ನಾವೆಲ್ಲರೂ ಸಮಾನರು ಎಂದು ಸಾರುತ್ತಾರೆ.

IslamHouse.com